








ಚಂದಮಾಮದಲ್ಲಿ

ಮಹಾಭಾರತ ಚಿತ್ರಸರಣಿ




1952ರಿಂದ 1961ರ ವರೆಗೆ ಚಂದಮಾಮದ ಮುಖಪುಟ , ಆ ಮೇಲೆ 1964ರ ವರೆಗೆ ಹಿಂಬದಿಯ ರಕ್ಷಾಪುಟದಲ್ಲಿ ಪ್ರಕಟವಾದ ಎಂ.ಟಿ.ವಿ. ಆಚಾರ್ಯ, ಶಂಕರ್ ಮತ್ತು ವಪಾ ಚಿತ್ರಿಸಿದ ಮಹಾಭಾರತದ ಆಯ್ದ ಸನ್ನಿವೇಶಗಳ 130 ಚಿತ್ರಗಳನ್ನು ಪುಟಕ್ಕೊಂದರಂತೆ ಸಂಯೋಜಿಸಲಾಗಿದೆ. ಉಪಕಥೆಗಳ ಚಿತ್ರಗಳೂ ಅನೇಕ ಇವೆ. ಪ್ರತಿ ಚಿತ್ರದ ಕೆಳಗೆ ಸಂಚಿಕೆಯ ವಿವರ, ಕಲಾವಿದರ ಹೆಸರು ಮತ್ತು ಚಿತ್ರಿಸಲಾದ ಸನ್ನಿವೇಶದ ಸಂಕ್ಷಿಪ್ತ ಮಾಹಿತಿ ಇದೆ. ಕನ್ನಡ ಸಂಚಿಕೆ ಲಭ್ಯವಿಲ್ಲದಲ್ಲಿ ತೆಲುಗು ಸಂಚಿಕೆಯಿಂದ ಚಿತ್ರವನ್ನು ಮತ್ತು ಹಿಂದಿ ಸಂಚಿಕೆಯಿಂದ ವಿವರವನ್ನು ಪಡೆದುಕೊಳ್ಳಲಾಗಿದೆ. ಹಿಂದಿ ಸಂಚಿಕೆ ಸಿಗದಿದ್ದ ಕಡೆ ವಿವರಗಳನ್ನು ಸುದರ್ಶನ ರೆಡ್ಡಿಯವರು ತೆಲುಗಿನಿಂದ ಭಾಷಾಂತರಿಸಿ ಕೊಟ್ಟಿದ್ದಾರೆ.


ಈ ಸಂಯೋಜನೆಯ ಕಾರ್ಯವನ್ನು ಸ್ವಾರ್ಥ ಮತ್ತು ಪರಾರ್ಥಕ್ಕಾಗಿ 2025 ಇಸವಿಯ ಅಗಸ್ಟ್ ತಿಂಗಳಲ್ಲಿ ಕೈಗೊಳ್ಳಲಾಯಿತು.

ಚಿದಂಬರ ಕಾಕತ್ಕರ್


ಮಂಗಳೂರು.




ಜುಲೈ 1952. MTV ಆಚಾರ್ಯ. ವೇದವ್ಯಾಸರು ಹೇಳುತ್ತಾ ಹೋದಂತೆ ಗಣೇಶ ಬರೆಯುತ್ತಿರುವ ಚಿತ್ರದೊಂದಿಗೆ ಚಂದಮಾಮದಲ್ಲಿ ಮಹಾಭಾರತ ಮುಖಚಿತ್ರ ಸರಣಿ ಆರಂಭ.



ಅಗಸ್ಟ್ 1952. MTV ಆಚಾರ್ಯ. ಕ್ರೂರ ಮೃಗಗಳನ್ನು ಪಳಗಿಸಿ ಅವುಗಳೊಂದಿಗೆ ಆಟ ಆಡುತ್ತಿರುವ ದುಶ್ಯಂತ ಶಕುಂತಲೆಯರ ಪುತ್ರ ಸರ್ವದಮನ.




ಸಪ್ಟಂಬರ್ 1952. MTV ಆಚಾರ್ಯ. ಪಾಂಡುವಿನೊಂದಿಗೆ ವನವಾಸದಲ್ಲಿದ್ದಾಗ ಕುಂತಿಯು ವಾಯುದೇವನ ಅನುಗ್ರಹದಿಂದ ಪಡೆದ ಭೀಮನು ಕೈ ಜಾರಿ ಕಲ್ಲುಗಳ ಮೇಲೆ ಬಿದ್ದಾಗ ಆ ಕಲ್ಲುಗಳೇ ಪುಡಿಯಾದುವಂತೆ.




ಅಕ್ಟೋಬರ್ 1952. MTV ಆಚಾರ್ಯ. ಬಾಲ್ಯದಲ್ಲೇ ಹಾವುಗಳನ್ನು ಬಿಟ್ಟು ಭೀಮನನ್ನು ಕೊಲ್ಲಲೆಣಿಸಿದ ದುರ್ಯೋಧನ.




ಡಿಸೆಂಬರ್ 1952. MTV ಆಚಾರ್ಯ. ಭೀಮನನ್ನು ಹೇಗೆ ನಾಶ ಮಾಡಬಹುದೆಂದು ಮಂತ್ರಾಲೋಚನೆ ನಡೆಸುತ್ತಿರುವ ಶಕುನಿ, ದುರ್ಯೋಧನ ಮತ್ತು ಕರ್ಣ.



ಜನವರಿ 1953. MTV ಆಚಾರ್ಯ. ಅರ್ಜುನನನ್ನು ಅಸೂಯೆಯಿಂದ ನೋಡುತ್ತಿರುವ ದ್ರೋಣ ಪುತ್ರ ಅಶ್ವತ್ಥಾಮ.




ಫೆಬ್ರವರಿ 1953. MTV ಆಚಾರ್ಯ. ಮಾನಸಿಕ ಗುರು ದ್ರೋಣಾಚಾರ್ಯರಿಗೆ ತನ್ನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಕೊಡುತ್ತಿರುವ ಏಕಲವ್ಯ.




ಮಾರ್ಚ್ 1953. ಚಂದಮಾಮ ಚಿತ್ರಕಾರರ ಬಳಗಕ್ಕೆ ಸೇರ್ಪಡೆಯಾದ ಶಂಕರ್ ರಚಿಸಿದ ಮೊದಲ ಮುಖಪುಟ ಚಿತ್ರ.

ದ್ರೋಣಾಚಾರ್ಯರಿಗೆ ಉಪಟಳ ಕೊಡಲು ಬಂದ ಮೊಸಳೆಯನ್ನು ಒಂದೇ ಬಾಣದಿಂದ ಯಮಪುರಿಗಟ್ಟಿದ ಅರ್ಜುನ.

ಏಪ್ರಿಲ್ 1953. ಶಂಕರ್. ಕರ್ಣಾರ್ಜುನರ ಪೈಪೋಟಿಗೆ ಒಪ್ಪದ ಭೀಷ್ಮ, ದ್ರೋಣಾದಿಗಳು.




ಏಪ್ರಿಲ್ 1953. ಶಂಕರ್. ಕರ್ಣಾರ್ಜುನರ ಪೈಪೋಟಿಗೆ ಒಪ್ಪದ ಭೀಷ್ಮ, ದ್ರೋಣಾದಿಗಳು.



ಮೇ 1953. ಶಂಕರ್. ದ್ರುಪದನನ್ನು ಗುರುದಕ್ಷಿಣೆಯಾಗಿ ದ್ರೋಣಾಚಾರ್ಯರಿಗೆ ತಂದೊಪ್ಪಿಸಿದ ಅರ್ಜುನ.




ಜೂನ್ 1953. ಶಂಕರ್. ಯಜ್ಞಕುಂಡದಲ್ಲಿ ಪ್ರತ್ಯಕ್ಷನಾಗಿ ದ್ರುಪದನಿಗೆ ದ್ರೌಪದಿಯನ್ನು ಒಪ್ಪಿಸುತ್ತಿರುವ ಅಗ್ನಿದೇವ.




ಜುಲೈ 1953. ಶಂಕರ್. ಪುರೋಚನನಿಗಿಂತ ಮೊದಲೇ ಅರಗಿನ ಮನೆಗೆ ಬೆಂಕಿ ಹಚ್ಚಿದ ಭೀಮ.


ಅಗಸ್ಟ್ 1953. ಶಂಕರ್. ಹಿಡಿಂಬವನದಲ್ಲಿ ವಿಶ್ರಮಿಸುತ್ತಿದ್ದ ಭೀಮನನ್ನು ಸುಂದರ ರೂಪ ತಾಳಿ ಮೋಹಿಸಿದ ಹಿಡಿಂಬಿ.




ಅಗಸ್ಟ್ 1953. ಶಂಕರ್. ಹಿಡಿಂಬವನದಲ್ಲಿ ವಿಶ್ರಮಿಸುತ್ತಿದ್ದ ಭೀಮನನ್ನು ಸುಂದರ ರೂಪ ತಾಳಿ ಮೋಹಿಸಿದ ಹಿಡಿಂಬಿ.




ಸಪ್ಟಂಬರ್ 1953. ಶಂಕರ್. ಬಕಾಸುರನಿಗಾಗಿ ತಂದ ಬಂಡಿ ಅನ್ನವನ್ನು ತಾನೇ ಉಣ್ಣುತ್ತಿರುವ ಭೀಮ.




ಅಕ್ಟೋಬರ್ 1953. ಶಂಕರ್. ಮತ್ಸ್ಯಯಂತ್ರವನ್ನು ಭೇದಿಸಿ ದ್ರೌಪದಿಯನ್ನು ವರಿಸಿದ ಅರ್ಜುನ.



ಡಿಸೆಂಬರ್ 1953. ಶಂಕರ್. ನಾರದರು ಪಾಂಡವರಿಗೆ ಹೇಳಿದ ತಿಲೋತ್ತಮೆ ಮತ್ತು ಸುಂದೋಪಸುಂದರ ಕಥೆ.




ಜನವರಿ 1954. ಶಂಕರ್. ಉಲೂಪಿಯು ಅರ್ಜುನನನ್ನು ನಾಗಲೋಕಕ್ಕೆ ಕರೆದೊಯ್ಯುತ್ತಿರುವುದು.




ಫೆಬ್ರವರಿ 1954. ಶಂಕರ್. ಅರ್ಜುನ ಸನ್ಯಾಸಿಯ ಸೇವೆಯಲ್ಲಿ ಸುಭದ್ರೆ.

ಮಾರ್ಚ್ 1954. ಶಂಕರ್. ಅರ್ಜುನನ ರಕ್ಷಣೆಯಲ್ಲಿ ಖಾಂಡವ ವನವನ್ನು ದಹಿಸಿದ ಅಗ್ನಿ.




ಮಾರ್ಚ್ 1954. ಶಂಕರ್. ಅರ್ಜುನನ ರಕ್ಷಣೆಯಲ್ಲಿ ಖಾಂಡವ ವನವನ್ನು ದಹಿಸಿದ ಅಗ್ನಿ.




ಎಪ್ರಿಲ್ 1954. ಶಂಕರ್. ಯಮಸುತನ ರಾಣಿಗೆ ಅಕ್ಷಯ ವಸನ ಇತ್ತ ಕೃಷ್ಣ.



ಮೇ 1954. ಶಂಕರ್. ವನವಾಸ ಕಾಲದಲ್ಲಿ ಬೇಡನ ರೂಪದ ಶಿವನಿಂದ ಪಾಶುಪತಾಸ್ತ್ರ ಪಡೆದ ಅರ್ಜುನ.



ಜೂನ್ 1954. ಶಂಕರ್. ಬ್ರಹದಶ್ವ ಮುನಿ ಧರ್ಮರಾಯನಿಗೆ ಹೇಳಿದ ನಳ ದಮಯಂತಿ ಕಥೆ.




ಜುಲೈ 1954. ಶಂಕರ್. ವನವಾಸದಲ್ಲಿದ್ದ ಪಾಂಡವರಿಗೆ ಧೌಮ್ಯ ಋಷಿ ಹೇಳಿದ ಗಂಗಾವತರಣದ ಕಥೆ



ಅಗಸ್ಟ್ 1954. ಶಂಕರ್. ಧರ್ಮರಾಯ ಆಲಿಸಿದ, ಋಷ್ಯಶೃಂಗನು ರೋಮಪಾದನ ಪುತ್ರಿಯನ್ನು ವಿವಾಹವಾದ ಕಥೆ.




ಸಪ್ಟಂಬರ್ 1954. ಶಂಕರ್. ಅಕೃತವರ್ಣನೆಂಬ ಋಷಿ ಧರ್ಮರಾಯನಿಗೆ ಹೇಳಿದ ರೇಣಕಾದೇವಿಯ ಕಥೆ.




ಅಕ್ಟೋಬರ್ 1954. ಶಂಕರ್. ಕ್ಷತ್ರಿಯ ವಂಶ ನಿರ್ನಾಮ ಮಾಡುವ ಪ್ರತಿಜ್ಞೆ ಗೈದ ಪರಶುರಾಮ




ಡಿಸೆಂಬರ್ 1955. ಶಂಕರ್. ರೋಮಶ ಋಷಿ ಧರ್ಮರಾಯನಿಗೆ ಹೇಳಿದ ಶಿಬಿಯ ಕಥಾನಕ.




ಜನವರಿ 1955. ಶಂಕರ್. ದ್ರೌಪದಿಗಾಗಿ ಸೌಗಂಧಿಕಾ ಪುಷ್ಪ ತರಲು ಹೊರಟ ಭೀಮ.




ಫೆಬ್ರವರಿ 1955. ಶಂಕರ್. ಹನುಮ ಭೀಮರ ಮುಖಾಮುಖಿ.




ಮಾರ್ಚ್ 1955. ಶಂಕರ್. ಜಟಾಸುರನೆಂಬ ರಾಕ್ಷಸನಿಂದ ದ್ರೌಪದಿಯ ಅಪಹರಣ.




ಎಪ್ರಿಲ್ 1955. ಶಂಕರ್. ಹೆಬ್ಬಾವಿನ ರೂಪದಲ್ಲಿ ಭೀಮನನ್ನು ಬಿಗಿದ ಶಾಪಗ್ರಸ್ತ ನಹುಷ.



ಮೇ 1955. ಶಂಕರ್. ವನವಾಸದಲ್ಲಿದ್ದ ಪಾಡವರನ್ನು ಭೇಟಿ ಮಾಡಲು ಬಂದ ಸತ್ಯಭಾಮಾ ಸಮೇತ ಕೃಷ್ಣ.




ಜೂನ್ 1955. ಶಂಕರ್. ಮಾರ್ಕಂಡೇಯ ಹೇಳಿದ, ತಾರ್ಕ್ಷ್ಯ ಮುನಿಯ ಪುತ್ರನು ಬಾಣ ತಾಗಿದರೂ ಬದುಕುಳಿದ ಕಥೆ.




ಜುಲೈ 1955. ಶಂಕರ್. ವನವಾಸ ಕಾಲದಲ್ಲಿ ನಾರದರು ಹೇಳಿದ ವೈವಸ್ವತ ಮನು ಮತ್ತು ಮತ್ಸ್ಯಾವತಾರದ ಕಥೆ.




ಅಗಸ್ಟ್ 1955. ಶಂಕರ್. ನಾರದರು ಹೇಳಿದ ಇಕ್ಷ್ವಾಕು ವಂಶದ ಪರೀಕ್ಷಿತ ಮತ್ತು ಮಂಡೂಕ ಕುವರಿಯ ಕಥೆ.




ಅಕ್ಟೋಬರ್ 1955. ಶಂಕರ್. ಮಂಡೂಕ ಕುವರಿಯ ಪುತ್ರರು ಮತ್ತು ಋಷಿ ವಾಮದೇವನ ಕುದುರೆಗಳ ಕಥೆ.




ಡಿಸೆಂಬರ್ 1955. ಶಂಕರ್. ವನವಾಸ ಕಾಲದಲ್ಲಿ ಪಾಂಡವರು ಆಲಿಸಿದ ದೀರ್ಘಾಯುಷಿ ಇಂದ್ರದ್ಯುಮ್ನನ ಕಥೆ.




ಜನವರಿ 1956. ಶಂಕರ್. ನಾರದ ಮುನಿ ಹೇಳಿದ ಕೌಶಿಕ ಮತ್ತು ಧರ್ಮವ್ಯಾಧನ ಕಥೆ.



ಫೆಬ್ರವರಿ 1956. ಶಂಕರ್. ಶಿವನ ನೇತ್ರಾಗ್ನಿ ಮತ್ತು ಗಂಗೆಯ ಸಂಗಮದಿಂದ ಜನಿಸಿದ ಕುಮಾರಸ್ವಾಮಿಯ ಕಥೆ.




ಮಾರ್ಚ್ 1956. ಶಂಕರ್. 'ಮಹಿಷಾಸುರ'ನನ್ನು ವಧಿಸುತ್ತಿರುವ ಕುಮಾರಸ್ವಾಮಿ.




ಎಪ್ರಿಲ್ 1956. ಶಂಕರ್. ಗಂಧರ್ವ ಚಿತ್ರಸೇನನ ಸೆರೆಯಿಂದ ದುರ್ಯೋಧನನನ್ನು ಬಿಡಿಸಿದ ಭೀಮಾರ್ಜುನರು.




ಮೇ 1956. ಶಂಕರ್. ಪ್ರಾಣತ್ಯಾಗ ಮಾಡಲು ಹೊರಟ ದುರ್ಯೋಧನನಿಗೆ ಧೈರ್ಯ ತುಂಬಲು ರಾಕ್ಷಸರ ಹೋಮ.




ಜೂನ್ 1956. ಶಂಕರ್.   ದ್ವೈತವನದಲ್ಲಿದ್ದಾಗ ಧರ್ಮರಾಯನ ಕನಸಿನಲ್ಲಿ ಕಾಣಿಸಿದ ವನ್ಯಮೃಗಗಳು.




ಜುಲೈ 1956. ಶಂಕರ್.   ಅಕ್ಷಯಪಾತ್ರೆಯ ತಳದಲ್ಲಿ ಉಳಿದಿದ್ದ ಒಂದಗುಳು ತಿಂದ ಕೃಷ್ಣ.




ಅಗಸ್ಟ್ 1956. ಶಂಕರ್. ದ್ರೌಪದಿಗೆ ದುಶ್ಯಲೆಯ ಪತಿ ಸೈಂಧವನ ಕಿರುಕುಳ.



ಸಪ್ಟಂಬರ್ 1956. ಶಂಕರ್. ಪಾಂಡವರಿಂದ ಅಪಮಾನಿತನಾದ ಸೈಂಧವನ ತಪಸ್ಸು.




ಅಕ್ಟೋಬರ್ 1956. ಶಂಕರ್. ಕರ್ಣನಿಂದ ಕವಚ ಕುಂಡಲ ಬೇಡಲು ಬಂದ ಇಂದ್ರ.




ಡಿಸೆಂಬರ್ 1956. M.T.V.ಆಚಾರ್ಯ. ಯಕ್ಷಪ್ರಶ್ನೆ.




ಜನವರಿ 1957. M.T.V.ಆಚಾರ್ಯ. ಮಾರ್ಕಂಡೇಯ ಮುನಿ ಹೇಳಿದ ಸತ್ಯವಾನ ಸಾವಿತ್ರಿ ಕಥೆ.




ಫೆಬ್ರವರಿ 1957. M.T.V.ಆಚಾರ್ಯ. ಭಾವೀಪತಿಯನ್ನು ಹುಡುಕುತ್ತಾ ಹೊರಟ ಸಾವಿತ್ರಿಗೆ ಕಾಣಿಸಿದ ಸತ್ಯವಾನ.



ಮಾರ್ಚ್ 1957. M.T.V.ಆಚಾರ್ಯ. ಸತ್ಯವಾನನ ಪ್ರಾಣ ಒಯ್ಯಲು ಬಂದ ಯಮಧರ್ಮ.



ಎಪ್ರಿಲ್ 1957. M.T.V.ಆಚಾರ್ಯ. ಅಜ್ಞಾತವಾಸಕ್ಕಾಗಿ ಮಾರುವೇಷ ಧರಿಸಿದ ಪಾಂಡವರು.



ಮೇ 1957. M.T.V.ಆಚಾರ್ಯ. ವಿರಾಟನ ಆಸ್ಥಾನದಲ್ಲಿ ಬಾಹುಬಲ ಪ್ರದರ್ಶಿಸುತ್ತಿರುವ ವಲಲನಾದ ಭೀಮ.




ಜೂನ್ 1957. M.T.V.ಆಚಾರ್ಯ. ಉತ್ತರೆಗೆ ನಾಟ್ಯ ಕಲಿಸುತ್ತಿರುವ ಬೃಹನ್ನಳೆಯಾದ ಅರ್ಜುನ.




ಜುಲೈ 1957. M.T.V.ಆಚಾರ್ಯ. ಸೈರಂಧ್ರಿಯಾದ ದ್ರೌಪದಿಯ ಮೇಲೆ ಕಣ್ಣು ಹಾಕಿದ ಕೀಚಕ.




ಅಗಸ್ಟ್ 1957. M.T.V.ಆಚಾರ್ಯ. ಸೈರಂಧ್ರಿಯನ್ನು ವಿರಾಟನ ಆಸ್ಥಾನದಲ್ಲಿ ಕೆಡಹಿದ ಕೀಚಕ.




ಸಪ್ಟಂಬರ್ 1957. M.T.V.ಆಚಾರ್ಯ. ಭೀಮನ ಸಹಾಯ ಯಾಚಿಸಿದ ದ್ರೌಪದಿ.



ಅಕ್ಟೋಬರ್ 1957. M.T.V.ಆಚಾರ್ಯ. ಕೀಚಕನನ್ನು ಕೊಂದ ವಲಲ.




ಡಿಸೆಂಬರ್ 1957. M.T.V.ಆಚಾರ್ಯ. ವಿರಾಟರಾಯನ ಗೋವುಗಳನ್ನು ಅಪಹರಿಸಿದ ದುರ್ಯೋಧನನ ಸೇನೆ.




ಜನವರಿ 1958. M.T.V.ಆಚಾರ್ಯ. ಉತ್ತರನ ಪೌರುಷ.




ಫೆಬ್ರವರಿ 1958. M.T.V.ಆಚಾರ್ಯ. ರಣರಂಗ ಬಿಟ್ಟೋಡುತ್ತಿರುವ ಉತ್ತರ ಕುಮಾರನನ್ನು ತಡೆಯುತ್ತಿರುವ ಅರ್ಜುನ.



ಮಾರ್ಚ್ 1958. M.T.V.ಆಚಾರ್ಯ. ಉತ್ತರನ ಸಾರಥ್ಯದಲ್ಲಿ ಕೌರವ ಸೇನೆಯನ್ನೆದುರಿಸಿದ ಅರ್ಜುನ.




ಎಪ್ರಿಲ್ 1958. M.T.V.ಆಚಾರ್ಯ. ಧರ್ಮರಾಯನ ಹಣೆಗೆ ತಾಗಿದ ವಿರಾಟ ಎಸೆದ ಪಗಡೆ ದಾಳ.




ಮೇ 1958. M.T.V.ಆಚಾರ್ಯ. ಅಜ್ಞಾತವಾಸ ಮುಗಿದು ವಿರಾಟನ ಮುಂದೆ ನಿಜರೂಪದಲ್ಲಿ ಕಾಣಿಸಿದ ಪಾಂಡವರು.




ಜೂನ್ 1958. M.T.V.ಆಚಾರ್ಯ. ದ್ರುಪದನು ತನ್ನ ಪುರೋಹಿತನನ್ನು ರಾಯಭಾರಿಯಾಗಿ ಕೌರವರೆಡೆಗೆ ಕಳಿಸಿದ.



ಜುಲೈ 1958. M.T.V.ಆಚಾರ್ಯ. ಕೃಷ್ಣನ ಸಹಾಯ ಕೋರಿ ಬಂದ ಅರ್ಜುನ ಮತ್ತು ದುರ್ಯೋಧನ.




ಅಗಸ್ಟ್ 1958. M.T.V.ಆಚಾರ್ಯ. ಮಾದ್ರಿಯ ಸೋದರ ಶಲ್ಯನು ಸೇನೆಯೊಂದಿಗೆ ಪಾಂಡವರ ಕಡೆ ಬರುತ್ತಿರುವುದು.




ಸಪ್ಟಂಬರ್ 1958. M.T.V.ಆಚಾರ್ಯ. ಕೌರವರ ಉತ್ತರದೊಂದಿಗೆ ಬಂದ ಸಂಜಯನಿಗೆ ಪಾಂಡವರ ಸ್ವಾಗತ.




ಅಕ್ಟೋಬರ್ 1958. M.T.V.ಆಚಾರ್ಯ. ಅವಮಾನಿಸಿದವರನ್ನು ಶಿಕ್ಷಿಸುವಂತೆ ಕೃಷ್ಣನಲ್ಲಿ ಬೇಡಿಕೊಳ್ಳುತ್ತಿರುವ ದ್ರೌಪದಿ.




ಡಿಸೆಂಬರ್ 1958. M.T.V.ಆಚಾರ್ಯ. ಕೃಷ್ಣ ಸಂಧಾನವನ್ನು ವಿರೋಧಿಸಿ ದುರ್ಯೋಧನನ ಸಭಾತ್ಯಾಗ.




ಜನವರಿ 1959. M.T.V.ಆಚಾರ್ಯ. ಕರ್ಣನಿಗೆ ಜನ್ಮರಹಸ್ಯ ತಿಳಿಸುತ್ತಿರುವ ಕೃಷ್ಣ.




ಫೆಬ್ರವರಿ 1959. M.T.V.ಆಚಾರ್ಯ. ರಹಸ್ಯವಾಗಿ ಕರ್ಣನನ್ನು ಭೇಟಿಯಾದ ಕುಂತಿ.




ಮಾರ್ಚ್ 1959. M.T.V.ಆಚಾರ್ಯ. ಕುರುಕ್ಷೇತ್ರದ ಹಿರಣ್ಯವತಿ ನದೀ ತೀರದಲ್ಲಿ ಬೀಡು ಬಿಟ್ಟ ಪಾಂಡವರ ಸೈನ್ಯ.




ಎಪ್ರಿಲ್ 1959. M.T.V.ಆಚಾರ್ಯ. ಯಾರ ಪಕ್ಷವೂ ಬೇಡ ಎಂದು ತೀರ್ಥಯಾತ್ರೆಗೆ ಹೊರಟ ಬಲರಾಮ.




ಮೇ 1959. M.T.V.ಆಚಾರ್ಯ. ತನ್ನನ್ನು ಅರ್ಧರಥ' ಎಂದು ಹೀಗಳೆದ ಭೀಷ್ಮನನ್ನು ಜರಿಯುತ್ತಿರುವ ಕರ್ಣ.




ಜೂನ್ 1959. M.T.V.ಆಚಾರ್ಯ. ಭೀಷ್ಮನು ಅಂಬೆ, ಅಂಬಿಕೆ, ಅಂಬಾಲಿಕೆಯರನ್ನು ಗೆದ್ದು ತಂದ ಫ್ಲಾಷ್ ಬ್ಯಾಕ್.




ಜುಲೈ 1959. M.T.V.ಆಚಾರ್ಯ. ಭೀಷ್ಮ ಪರಶುರಾಮರ ಕದನ ತಡೆಯಲು ಗಂಗೆಯ ಸಂಧಾನ.




ಅಗಸ್ಟ್ 1959. M.T.V.ಆಚಾರ್ಯ. ಭೀಷ್ಮನನ್ನು ಕೊಲ್ಲಲು ಶಕ್ತಿ ಕೊಡು ಎಂದು ಶಿವನನ್ನು ಬೇಡುತ್ತಿರುವ ಅಂಬೆ.




ಸಪ್ಟಂಬರ್ 1959. M.T.V.ಆಚಾರ್ಯ. ತನ್ನ ಪುರುಷತ್ವವನ್ನು ಶಿಖಂಡಿಗೆ ಕೊಟ್ಟು ಸ್ತ್ರೀ ರೂಪ ತಾಳಿದ ಸ್ಥೂಣಾಕರ್ಣ.




ಅಕ್ಟೋಬರ್ 1959. M.T.V.ಆಚಾರ್ಯ. ಶತ್ರು ಪಕ್ಷದಲ್ಲಿ ಬಂಧುಗಳನ್ನು ಕಂಡು ಯುದ್ಧ ಬೇಡವೆಂದೆನಿಸಿದ ಅರ್ಜುನ.




ಡಿಸೆಂಬರ್ 1959. M.T.V.ಆಚಾರ್ಯ. ರಣರಂಗದ ದೃಶ್ಯ.




ಜನವರಿ 1960. M.T.V.ಆಚಾರ್ಯ. ಅರ್ಜುನನ ಮೊಂಡಾಟಕ್ಕೆ ರೋಸಿ ಹೋದ ಕೃಷ್ಣನು ಚಕ್ರ ಹಿಡಿದಾಗ ಶ್ರೀ ಮನೋಹರಸ್ವಾಮಿ ಪರಾಕು ಎಂದ ಭೀಷ್ಮ.




ಫೆಬ್ರವರಿ 1960. M.T.V.ಆಚಾರ್ಯ. ಮಾಯಾ ಐರಾವತವನ್ನೇರಿ ಕೌರವರ ಮೇಲೆ ಏರಿ ಹೋದ ಘಟೋತ್ಕಚ.




ಮಾರ್ಚ್ 1960. M.T.V.ಆಚಾರ್ಯ. ಗಾಯಾಳು ದುರ್ಯೋಧನನಿಗೆ ಸಾಂತ್ವನ ಹೇಳುತ್ತಿರುವ ಭೀಷ್ಮ.




ಎಪ್ರಿಲ್ 1960. M.T.V.ಆಚಾರ್ಯ. ಶಿಬಿರದಲ್ಲಿ ಗಾಯಾಳು ಯೋಧರಿಗೆ ಚಿಕಿತ್ಸೆ ಮತ್ತು ಹುರಿದುಂಬಿಸಲು ಸಂಗೀತ.




ಮೇ 1960. M.T.V.ಆಚಾರ್ಯ. ಭೀಷ್ಮನ ಬಿಡಾರದತ್ತ ಕೃಷ್ಣನೊಂದಿಗೆ ಗುಪ್ತವಾಗಿ ಹೊರಟ ಪಾಂಡವರು.




ಜೂನ್ 1960. M.T.V.ಆಚಾರ್ಯ. ಶರಶಯ್ಯೆಯಲ್ಲಿರುವ ಭೀಷ್ಮನಿಗೆ ಅರ್ಜುನನಿಂದ ಜಲ ಸಿಂಚನ.




ಜುಲೈ 1960. M.T.V.ಆಚಾರ್ಯ. 12ನೇ ದಿನದ ರಣರಂಗದ ಭೀಕರ ದೃಶ್ಯ,




ಅಗಸ್ಟ್ 1960. M.T.V.ಆಚಾರ್ಯ. ಚಕ್ರವ್ಯೂಹದೊಳಗೆ ಏಕಾಂಗಿಯಾಗಿ ಹೋರಾಡಿ ಮಡಿದ ಅಭಿಮನ್ಯು.




ಸಪ್ಟಂಬರ್ 1960. M.T.V.ಆಚಾರ್ಯ. ಶಿವನು ತನಗೆ ವಿಶೇಷ ಅಸ್ತ್ರಗಳನ್ನು ಕೊಟ್ಟಂತೆ ಅರ್ಜುನ ಕನಸು ಕಂಡ.




ಅಕ್ಟೋಬರ್ 1960. M.T.V.ಆಚಾರ್ಯ. ಯುದ್ಧ ಭೂಮಿಯಲ್ಲೇ ಕೊಳ ನಿರ್ಮಿಸಿ 'ಪಾಂಡವರ ಮನೆಯೊಳಗೆ ಕುದುರೆಗಳ ತಾ ತೊಳೆದ' ಕೃಷ್ಣ.



ಡಿಸೆಂಬರ್ 1960. M.T.V.ಆಚಾರ್ಯ. ಅಶ್ವತ್ಥಾಮ, ಕೃಪ ಮತ್ತು ಕರ್ಣರ ವಾಗ್ವಾದ ತಡೆಯುತ್ತಿರುವ ದುರ್ಯೋಧನ.



ಜನವರಿ 1961. M.T.V.ಆಚಾರ್ಯ. ಜಟಾಸುರನ ಮಗ ಅಲಂಬುಸನನ್ನು ಕೊಂದ ಘಟೋತ್ಕಚ.



ಫೆಬ್ರವರಿ 1961. M.T.V.ಆಚಾರ್ಯ. ದೃಷ್ಟದ್ಯುಮ್ನನಿಂದ ದ್ರೋಣಾಚಾರ್ಯರ ಹತ್ಯೆ. ಈ ಸಂಚಿಕೆಯಿಂದ ಮಹಾಭಾರತ ಸರಣಿ ಹಿಂಬದಿಯ ರಕ್ಷಾಪುಟಕ್ಕೆ ಸ್ಥಳಾಂತರ ಹೊಂದಿತು.




ಮಾರ್ಚ್ 1961. M.T.V.ಆಚಾರ್ಯ. ಕರ್ಣನಿಗೆ ಕುರು ಸೇನಾಧಿಪತ್ಯದ ಹೊಣೆ.




ಎಪ್ರಿಲ್ 1961. M.T.V.ಆಚಾರ್ಯ. ಕರ್ಣನಿಗೆ ಶಲ್ಯನ ಶರತ್ತುಬದ್ಧ ಸಾರಥ್ಯ.




ಮೇ 1961. M.T.V.ಆಚಾರ್ಯ. ಯುದ್ಧರಂಗದಲ್ಲಿ ಗಾಯಗೊಂಡ ಧರ್ಮರಾಯನಿಗೆ ಶಿಬಿರದಲ್ಲಿ ಉಪಚಾರ.



ಜೂನ್ 1961. M.T.V.ಆಚಾರ್ಯ. ಧರ್ಮರಾಯನನ್ನು ವಧಿಸುತ್ತೇನೆಂದು ಹೇಳಿ ಮತ್ತೆ ತನ್ನ ತಪ್ಪನ್ನರಿತು ಆತನ ಕಾಲು ಹಿಡಿದ ಅರ್ಜುನ.




ಜುಲೈ 1961. M.T.V.ಆಚಾರ್ಯ. ದುಶ್ಯಾಸನ ವಧೆ.



ಅಗಸ್ಟ್ 1961. M.T.V.ಆಚಾರ್ಯ. ಹೂತು ಹೋದ ರಥದ ಚಕ್ರವನ್ನು ಎತ್ತಲು ಪ್ರಯತ್ನಿಸುತ್ತಿರುವ ಕರ್ಣ..



ಸಪ್ಟಂಬರ್ 1961. M.T.V.ಆಚಾರ್ಯ. ಯುದ್ಧದ ಕೊನೆ ದಿನದ ದೃಶ್ಯ.



ಅಕ್ಟೋಬರ್ 1961. M.T.V.ಆಚಾರ್ಯ. ಖಿನ್ನಮನಸ್ಕನಾಗಿ ದ್ವೈಪಾಯನ ಸರೋವರದ ಬಳಿ ಕುಳಿತ ದುರ್ಯೋಧನ.




ಡಿಸೆಂಬರ್ 1961. M.T.V.ಆಚಾರ್ಯರ ಅತಿ ಪ್ರಸಿದ್ಧ ಕಲಾಕೃತಿ ಗದಾಯುದ್ಧ.

ಹೋಯಿತು.




ಜನವರಿ 1962. M.T.V.ಆಚಾರ್ಯ. ಯುದ್ಧ ಮುಗಿದು ಕೃಷ್ಣ ಕೆಳಗಿಳಿಯುತ್ತಲೇ ಅರ್ಜುನನ ರಥ ಭಗ್ಗನೆ ಉರಿದು ಹೋಯಿತು.




ಫೆಬ್ರವರಿ 1962. M.T.V.ಆಚಾರ್ಯ. ಮಲಗಿದ್ದ ಪಾಂಡವರನ್ನು ಸಂಹರಿಸಲು ಹೊರಟ ಅಶ್ವತ್ಥಾಮನಿಗೆ ಭೂತವೊಂದು ಕಾಣಿಸಿತು.




ಮಾರ್ಚ್ 1962. M.T.V.ಆಚಾರ್ಯ. ಪಾಂಡವರನ್ನು ಕೊಲ್ಲುವ ಶಕ್ತಿಗಾಗಿ ಶಿವನನ್ನು ಧ್ಯಾನಿಸಿದ ಅಶ್ವತ್ಥಾಮ.



ಎಪ್ರಿಲ್ 1962. M.T.V.ಆಚಾರ್ಯ. ಉಪಪಾಂಡವರನ್ನು ಕೊಂದ ಅಶ್ವತ್ಥಾಮನ ತಲೆಯಲ್ಲಿದ್ದ ಸಹಜಮಣಿಯನ್ನು ತಂದು ದ್ರೌಪದಿಗೆ ಕೊಡುತ್ತಿರುವ ಭೀಮ.




ಮೇ 1962. M.T.V.ಆಚಾರ್ಯ. ಯಾವ ಸ್ಥಿತಿಯಲ್ಲಿದ್ದರೂ ಮನುಷ್ಯ ಆಸೆ ಬಿಡನು ಎಂದು ವಿದುರ ಧೃತರಾಷ್ಟ್ರನಿಗೆ ಹೇಳಿದ ಬ್ರಾಹ್ಮಣನ ಕಥೆ.




ಜೂನ್ 1962. M.T.V.ಆಚಾರ್ಯ. ಧೃತರಾಷ್ಟ್ರಾಲಿಂಗನ.




ಜುಲೈ 1962. M.T.V.ಆಚಾರ್ಯ. ಕುಂತಿ ಧರ್ಮರಾಯನಿಗೆ ಹೇಳಿದ ಕರ್ಣನ ಜನ್ಮ ವೃತ್ತಾಂತದ ಫ್ಲಾಷ್ ಬ್ಯಾಕ್.



ಅಗಸ್ಟ್ 1962. M.T.V.ಆಚಾರ್ಯ. ಕರ್ಣ ಪರಶುರಾಮನಿಂದ ಶಾಪ ಪಡೆದ ಕಥೆಯನ್ನು ನಾರದ ಮುನಿಗಳು ಧರ್ಮರಾಯನಿಗೆ ಹೇಳಿದರು.




ಸಪ್ಟಂಬರ್ 1962. M.T.V.ಆಚಾರ್ಯ. ರಾಜಧರ್ಮದ ಕುರಿತು ಧರ್ಮರಾಯನಿಗೆ ವಿವರಿಸುತ್ತಾ ವ್ಯಾಸರು ಹೇಳಿದ ಶಂಖ ಮತ್ತು ಲಿಖಿತ ಎಂಬ ಸೋದರರ ಕಥೆ.



ಅಕ್ಟೋಬರ್ 1962. M.T.V.ಆಚಾರ್ಯ. ಧರ್ಮರಾಯನನ್ನು ರಂಜಿಸಲು ಕೃಷ್ಣ ಹೇಳಿದ ಸುವರ್ಣಷ್ಠಿಯ ಕಥೆ.



ಡಿಸೆಂಬರ್ 1962. M.T.V.ಆಚಾರ್ಯ. ಧರ್ಮರಾಯನ ಪಟ್ಟಾಭಿಷೇಕ.




ಜನವರಿ 1963. M.T.V.ಆಚಾರ್ಯ. ನಿರ್ಯಾಣಕ್ಕೆ ಮುನ್ನ ಭೀಷ್ಮನಿಂದ ಧರ್ಮರಾಯನಿಗೆ ರಾಜಧರ್ಮ ಬೋಧನೆ.




ಮಾರ್ಚ್ 1963. M.T.V.ಆಚಾರ್ಯ. ಅಶ್ವಮೇಧಕ್ಕಾಗಿ ಮರುತ್ತನ ಧನ ತರಲು ಹಿಮಾಲಯಕ್ಕೆ ಹೋದ ಪಾಂಡವರು.


ಪರೀಕ್ಷಿತನನ್ನು ಕೃಷ್ಣ ಕಾಲಿನಿಂದ ಸೋಕಿ ಜೀವಂತಗೊಳಿಸಿದ.



ಎಪ್ರಿಲ್ 1963. M.T.V.ಆಚಾರ್ಯ. ಅಶ್ವತ್ಥಾಮನ ಬ್ರಹ್ಮಾಸ್ತ್ರದ ಪರಿಣಾಮದಿಂದ ಸತ್ತು ಹುಟ್ಟಿದ್ದ ಉತ್ತರೆಯ ಪುತ್ರ ಪರೀಕ್ಷಿತನನ್ನು ಕೃಷ್ಣ ಕಾಲಿನಿಂದ ಸೋಕಿ ಜೀವಂತಗೊಳಿಸಿದ.



ಮೇ 1963. M.T.V.ಆಚಾರ್ಯ. ಅಶ್ವಮೇಧದ ಕುದುರೆಯೊಂದಿಗೆ ದಿಗ್ವಿಜಯಕ್ಕೆ ಹೊರಟ ಅರ್ಜುನ.




ಜೂನ್ 1963. M.T.V.ಆಚಾರ್ಯ. ಮಣಿಪುರದಲ್ಲಿ ತಂದೆ ಅರ್ಜುನನಿಗೆ ಬಭ್ರುವಾಹನ ಕಾಣಿಕೆ ಕೊಡುತ್ತಿರುವುದು.


ಚಿತ್ರಾಂಗದೆಯರು ಉಪಚರಿಸುತ್ತಿರುವುದು.




ಜುಲೈ 1963. M.T.V.ಆಚಾರ್ಯ. ಯುದ್ಧದಲ್ಲಿ ಗಾಯಗೊಂಡ ಅರ್ಜುನನನ್ನು ಬಭ್ರುವಾಹನ, ಉಲೂಪಿ, ಚಿತ್ರಾಂಗದೆಯರು ಉಪಚರಿಸುತ್ತಿರುವುದು.



ಅಗಸ್ಟ್ 1963. M.T.V.ಆಚಾರ್ಯ. ಹಸಿದವನಿಗೆ ಹಿಟ್ಟು ದಾನ ಮಾಡಿದಷ್ಟು ಪುಣ್ಯವೂ ಅಶ್ವಮೇಧದಿಂದ ಸಿಗಲಿಲ್ಲ ಎಂದು ಚಿನ್ನದ ಮೈಯ ಮುಂಗುಸಿ ಹೇಳಿದ ಕಥೆ.



ಸಪ್ಟಂಬರ್ 1963. MTV ಆಚಾರ್ಯ. ಯುದ್ಧ ಮುಗಿದು ಅನೇಕ ವರ್ಷಗಳಾದರೂ ಹಿಂದಿನದನ್ನು ಮರೆಯದ ಭೀಮ ಕೌರವರನ್ನು ಕೊಂದ ತನ್ನ ಬಲಿಷ್ಠ ಕೈಗಳನ್ನು ಸಹಚರರಿಗೆ ತೋರಿಸಿ ಬಡಾಯಿ ಕೊಚ್ಚಿಕೊಳ್ಳುತ್ತಿದ್ದ. ಇದು ಚಂದಮಾಮವನ್ನು ತೊರೆಯುವ ಮೊದಲು MTV ಆಚಾರ್ಯರು ರಚಿಸಿದ ಕೊನೆಯ ಚಿತ್ರ.




ಅಕ್ಟೋಬರ್ 1963. ವಪಾ. ವಾನಪ್ರಸ್ತಕ್ಕೆ ಹೊರಟ ಧೃತರಾಷ್ಟ್ರ, ಗಾಂಧಾರಿ ಮತ್ತು ಕುಂತಿಗೆ ಪುರಜನರ ವಿದಾಯ.




ನವಂಬರ್ 1963. ವಪಾ. ವನವಾಸ ಸಮಯದಲ್ಲಿ ಬಂದ ನಾರದ ಮಹರ್ಷಿಯಿಂದ ಸ್ವರ್ಗಲೋಕದ ಸಮಾಚಾರಗಳನ್ನು ಆಲಿಸುತ್ತಿರುವ ಧೃತರಾಷ್ಟ್ರ, ಗಾಂಧಾರಿ ಮತ್ತು ಕುಂತಿ..




ಡಿಸೆಂಬರ್ 1963. ವಪಾ. ವನದಲ್ಲಿ ಭೇಟಿಯಾಗಲು ಹೋದ ಧರ್ಮರಾಯನಲ್ಲಿ ಲೀನನಾದ ವಿದುರ.




ಜನವರಿ 1964. ವಪಾ. ಧೃತರಾಷ್ಟ್ರಾದಿಗಳಿಗೆ ವ್ಯಾಸರು ಯುದ್ಧದಲ್ಲಿ ಮಡಿದವರ ಭೇಟಿ ಮಾಡಿಸಿದರು.



ಫೆಬ್ರವರಿ 1964. ವಪಾ. ಧೃತರಾಷ್ಟ್ರ, ಗಾಂಧಾರಿ ಮತ್ತು ಕುಂತಿಯನ್ನು ಕಾಡ್ಗಿಚ್ಚಿನಲ್ಲಿ ಬಿಟ್ಟು ಒಲ್ಲದ ಮನಸ್ಸಿನಿಂದ ತೆರಳುತ್ತಿರುವ ಸಂಜಯ.



ಮಾರ್ಚ್ 1964. ವಪಾ. ಜರನೆಂಬ ಬೇಡನ ಬಾಣ ಹೆಬ್ಬೆರಳಿಗೆ ತಾಗಿ ಕೃಷ್ಣಾವತಾರ ಕೊನೆಯಾಯಿತು.



ಎಪ್ರಿಲ್ 1964. ವಪಾ. ವಸುದೇವ ಸಾಯುತ್ತಲೇ ಮುಳುಗತೊಡಗಿದ ದ್ವಾರಕೆಯಿಂದ ಅರ್ಜುನ ಹಸ್ತಿನಾವತಿಯತ್ತ ಹೊರಟ.



ಮೇ 1964. ವಪಾ. ಶ್ವಾನ ರೂಪದ ಯಮನೊಂದಿಗೆ ಸಶರೀರನಾಗಿ ಸ್ವರ್ಗ ಸೇರಿದ ಧರ್ಮರಾಯ.

ಶುಭಂ